

# ಜನಪ್ರಿಯ ಜಾಡಿನಲ್ಲಿ ತೇಲುನಡಿಗೆ

**ಆಧುನಿಕತೆ ಕೌಟುಂಬಿಕ ಮೌಲ್ಯಗಳನ್ನು ಹಾಳುಮಾಡಿದೆ ಎಂಬ ಜನಪ್ರಿಯ ಹೇಳಿಕೆಯ ಬೆನ್ನುಬಿದ್ದು ಹೊರಡುವ ಈ ಕಿರುಚಿತ್ರ ಅದೇ ಸಂಗತಿಯನ್ನು ಆಳವಾಗಿ ಧ್ವನಿಸಲು ಸೋಲುತ್ತದೆ.**

■ ಗೌರಿ

ಆಧುನಿಕತೆ ನಮ್ಮ ಬದುಕನ್ನು ಹೇಗೆ ಬದಲಾಯಿಸಿದೆ, ಈ ಬದಲಾವಣೆ ಕುಟುಂಬ ವ್ಯವಸ್ಥೆಯನ್ನು ಹೇಗೆ ಆಳವಾಗಿ ಕಲಕಿದೆ ಎಂಬುದರ ಬಗ್ಗೆ ಗಂಭೀರವಾಗಿ ಚಿತ್ರಿಸುವ ಸಿನಿಮಾಗಳು ಬಂದಿರುವುದು ಕಡಿಮೆಯೇ. ಆಧುನಿಕತೆಯ ಮೇಲು ಮೇಲಿನ ನೋಟದ ಚಿತ್ರಗಳನ್ನೇ ನೆಚ್ಚಿಕೊಂಡು ಅದನ್ನೊಂದು ವಿಲನ್ ಅನ್ನುವ ರೀತಿಯಲ್ಲಿ ಚಿತ್ರಿಸಿ ಮುಗಿಸಿಬಿಡುವ ಪ್ರಯತ್ನಗಳೇ ಹೆಚ್ಚು.

‘ಡಿಸ್‌ಕನೆಕ್ಟೆಡ್’ ಕಿರುಚಿತ್ರ ಕೂಡ ಹೀಗೆಯೇ ಒಂದು ಕುಟುಂಬದೊಟ್ಟಿಗೆ ಆಧುನಿಕತೆಯನ್ನು ಮುಖಾಮುಖಿ ಮಾಡಿ, ಕಪ್ಪುಬಿಳುಪಾಗಿ ತೋರಿಸುವ ಪ್ರಯತ್ನವೇ ಆಗಿದೆ. ತಾಂತ್ರಿಕವಾಗಿ ಒಂದು ಕಥನವನ್ನು ಕಟ್ಟುವ ಕೌಶಲದ ದೃಷ್ಟಿಯಿಂದ ಈ ಕಿರುಚಿತ್ರ ಗಮನಸೆಳೆದರೂ, ಒಟ್ಟಾರೆ ಏನನ್ನು ಹೇಳಹೊರಟಿದೆ ಎಂಬುದರ ಕುರಿತು ಹಲವು ಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆ.

ಡಿಸ್‌ಕನೆಕ್ಟ್‌ನ ಸೂಚನೆ ಇದರ ಮೊದಲ ದೃಶ್ಯದಿಂದಲೇ ಆರಂಭವಾಗುತ್ತದೆ. ಹೆಂಡತಿ ಮಲಗಿದ್ದಾಳೆ. ಗಂಡ ಆಫೀಸಿಗೆ ಹೋಗಲು ಸಿದ್ಧನಾಗಿದ್ದಾನೆ. ‘ರಾತ್ರಿ ಊಟಕ್ಕೆ ಬರುತ್ತೀಯಾ?’ ಎಂದು ಕೇಳಿದರೆ ‘ಅನುಮಾನ’ ಎನ್ನುತ್ತಾನೆ ಗಂಡ. ಅವನು ಅತ್ತ ಹೋದ ಹಾಗೆಯೇ ಹೆಂಡತಿಯ ಮೊಬೈಲಿಗೆ ಮೆಸೇಜ್ ಬರುತ್ತದೆ. ಆ ಸಂಭಾಷಣೆಯಲ್ಲಿಯೇ ತಿಳಿಯುವ ಹಾಗೆ ಅದು ವಿವಾಹೇತರ ಸಂಬಂಧ. ಆದರೆ ಆ ಸಂಬಂಧ ಇನ್ನೂ ಮುಖಾಮುಖಿಯಾಗುವ ಹಂತ ತಲುಪಿಲ್ಲ. ಮೊಬೈಲಿನಲ್ಲಿಯೇ ಪರಿಚಿತರಾಗಿ ಅನಾಮಿಕ ಹೆಸರಿನಿಂದ ಚಾಟ್ ಮಾಡಿಕೊಳ್ಳುತ್ತ ವರ್ಚುವಲ್ ಜಗತ್ತಿನಲ್ಲಿ ಹುಟ್ಟಿದ ಸಂಬಂಧ. ಅತ್ತ ಮೆಸೇಜ್ ಮಾಡುತ್ತಿರುವವನು ‘ಇಂದು ಸಂಜೆ ಭೇಟಿಯಾಗೋಣವೇ?’ ಎಂದು ಕೇಳುತ್ತಾನೆ.

ಆ ಗಂಡಹೆಂಡತಿಗೆ ಹದಿಹರೆಯಕ್ಕೆ ಕಾಲಿಡುತ್ತಿರುವ ಒಬ್ಬಳು ಮುದ್ದು ಮಗಳಿದ್ದಾಳೆ.



ಹೆಸರು: ಡಿಸ್‌ಕನೆಕ್ಟೆಡ್
ನಿರ್ದೇಶನ: ಸುಹೈಲ್ ತತಾರಿ
ಕಥೆ ಚಿತ್ರಕಥೆ: ಮಂದಿರ್ ಸಾಹ್ನಿ
ತಾರಾಗಣ: ಗುಲ್ ಪನಾಗ್, ಸತ್ಯದೀಪ್ ಮಿಶ್ರಾ, ಮಹೇಕ್ ಠಾಕೂರ್
ಛಾಯಾಗ್ರಾಹಕ: ಪ್ರಕಾಶ್ ಕುಟ್ಟಿ
ಸಂಕಲನ: ಕುಲದೀಪ್ ಕೆ. ಮಹನ್
ಸಂಗೀತ: ಗೌರಂಗ್ ಸೋನಿ

ಅಪ್ಪ ಅಮ್ಮ ಯಾವತ್ತೂ ಮೊಬೈಲ್‌ನಲ್ಲಿ ಮುಳುಗಿದ್ದರೆ, ಮಗಳಿಗೆ ಸ್ಮಾರ್ಟ್‌ಫೋನ್ ಕಂಡರೆ ದ್ವೇಷ. ಅಪ್ಪ ಅಮ್ಮನನ್ನು ತನ್ನಿಂದ ಕಿತ್ತುಕೊಂಡಿದ್ದು ಅದು ಎಂಬ ನೋವು ಅವಳಿಗಿದೆ. ಸಂಜೆ ಅಪ್ಪ ಅಮ್ಮ ಇಬ್ಬರೂ ಮನೆಯಲ್ಲಿ ಇರುವುದಿಲ್ಲ ಎಂಬುದು ತಿಳಿಯುತ್ತಿದ್ದ ಹಾಗೆ ಅವಳು ತನ್ನ ಸ್ನೇಹಿತರನ್ನು ಮನೆಗೆ ಕರೆಯುವ ಯೋಜನೆ ಹಾಕುತ್ತಾಳೆ. ಹೀಗೆ ಮೂರೇ ಜನರ ಆ ಕುಟುಂಬ ಮೂರು ಭಾಗಗಳಲ್ಲಿ ಛಿದ್ರವಾಗಿ ಹೋಗುತ್ತದೆ.

ಹೀಗೆ ಛಿದ್ರವಾದ ಕುಟುಂಬದ ಮೂವರೂ ವಿಚಿತ್ರ ರೀತಿಯಲ್ಲಿ ಮುಖಾಮುಖಿಯಾಗುತ್ತಾರೆ. ಹೆಂಡತಿ ತನ್ನ ವರ್ಚುವಲ್ ಸ್ನೇಹಿತನನ್ನು ಭೇಟಿಯಾಗಲು ಒಂದು ಹೋಟೆಲಿಗೆ ಹೋಗುತ್ತಾಳೆ. ಅಲ್ಲಿ ಆ ಸ್ನೇಹಿತ ಬೇರೆ ಯಾರೂ ಅಲ್ಲ, ತನ್ನ ಗಂಡನೇ ಎಂಬುದು ತಿಳಿಯುತ್ತದೆ. ಇಬ್ಬರೂ ಕೋಪ ಮಾಡಿಕೊಂಡು ಮನೆಗೆ ಬಂದರೆ ಮಗಳ ಸ್ನೇಹಿತರು ಪಾರ್ಟಿ ಮಾಡುತ್ತಿರುತ್ತಾರೆ. ಮಗಳನ್ನು ಹುಡುಕಿಕೊಂಡು ರೂಮಿಗೆ ಹೋದರೆ ಅವಳು ಇನ್ನೊಬ್ಬ ಹುಡುಗಿಯ ಜೊತೆಗೆ ಪ್ರಣಯದಲ್ಲಿ ತೊಡಗಿರುತ್ತಾಳೆ.

ಇಷ್ಟನ್ನು ತೋರಿಸುವ ನಿರ್ದೇಶಕರು ಥಟ್ಟನೇ ಇದು, ತನ್ನ ಸ್ನೇಹಿತನಿಗಾಗಿ ಹೋಟೆಲಲ್ಲಿ ಕಾಯುತ್ತ ಕೂತಿರುವ ಹೆಂಡತಿಯ ಕಲ್ಪನೆಯಲ್ಲಿ ನಡೆದಿದ್ದು ಎಂಬುದನ್ನು ಜಾಹೀರು ಮಾಡುತ್ತಾರೆ.

ನಿಜಬದುಕಿನ ಸಂಗಾತಿಗಳು ವರ್ಚುವಲ್ ಜಗತ್ತಿನಲ್ಲಿ ಇನ್ನೊಂದು ಸಂಬಂಧವನ್ನು ಹುಡುಕಿಹೊರಟು ಅವರೇ ಪರಸ್ಪರ ಮುಖಾಮುಖಿಯಾಗುವ ಆಕಸ್ಮಿಕಗಳು ಹೊಸದೇನಲ್ಲ. ಆದರೆ ನಿರ್ದೇಶಕರು ಇದನ್ನು ನಾಯಕಿಯ ಕಲ್ಪನೆಗೆ ಇಳಿಸಿ ಅವಳ ಮನಃಪರಿವರ್ತನೆಗೆ ಮುಂದಾಗಿದ್ದಾರೆ. ಆದರೆ ಈ ಮನಪರಿವರ್ತನೆಯ ಭರದಲ್ಲಿ ಅವರು ಅದರ ಮೂಲಕ ಏನು ಹೇಳಲು ಹೊರಟಿದ್ದೇನೆ ಎಂಬುದನ್ನೇ ಅಸ್ಪಷ್ಟಗೊಳಿಸಿದ್ದಾರೆ. ಮಗಳು ಸಲಿಂಗರತಿಯಲ್ಲಿ ತೊಡಗಿರುವುದು ಅಮ್ಮನ ಕಲ್ಪನೆಯಲ್ಲಿ ಯಾಕೆ ಬರಬೇಕು? ಒಂದೊಮ್ಮೆ ಅಪ್ಪ ಅಮ್ಮ ಸೌಹಾರ್ದದಿಂದ ಇದ್ದರೆ ಮಕ್ಕಳು ಸಲಿಂಗಿಗಳಾಗುವುದಿಲ್ಲವೇ? ಸಲಿಂಗಪ್ರೇಮ ಎನ್ನುವುದು ಆಯ್ಕೆಯಲ್ಲ, ಅನಿವಾರ್ಯ ಎಂಬುದೂ ನಿರ್ದೇಶಕರಿಗೆ ತಿಳಿದಂತಿಲ್ಲ. ಅತ್ತ ಮೊಬೈಲ್ ತಂತ್ರಜ್ಞಾನ ನಮ್ಮ ಮನಸ್ಸನ್ನು ಹೇಗೆ ವಿಘಟಿಸುತ್ತಿದೆ ಎಂಬುದನ್ನೂ ಸಮರ್ಥವಾಗಿ ತೋರಿಸದ ಈ ಕಿರುಚಿತ್ರ, ಇತ್ತ ಕೌಟುಂಬಿಕ ಮೌಲ್ಯಗಳಲ್ಲಾದ ಪಲ್ಲಟವನ್ನು ಗಟ್ಟಿಯಾಗಿ ಕಟ್ಟಿಕೊಡುವುದಿಲ್ಲ. ಹಾಗಾಗಿ ತಾಂತ್ರಿಕವಾಗಿ ಗಟ್ಟಿಯಿರುವ ಈ ಕಿರುಚಿತ್ರ ಅನುಭವದ ದೃಷ್ಟಿಯಿಂದ ಅಳ್ಳಕವಾಗಿಯೇ ಕಾಣಿಸುತ್ತದೆ.

ಈ ಕಿರುಚಿತ್ರ ವೀಕ್ಷಣೆಗೆ bit.ly/3b1rdhO ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.